# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: | 912 (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವರ್ಗಾಯಿತ) |
| ಸದಸ್ಯರ ಹೆಸರು: | ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 23.02.2023 |
| ಉತ್ತರಿಸುವ ಸಚಿವರು: | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿಯ ಕದಲಗೆರೆಯಿಂದ ಕಾಡೇನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪ್ರಸ್ತುತ ರಸ್ತೆಯ ಸ್ಥಿತಿಗತಿಗಳ ಬಗ್ಗೆ ಪರಿಶೀಲಿಸಿ ವರದಿಯನ್ನು ನೀಡುವುದು) | ಸರ್ಕಾರದ ಗಮನಕ್ಕೆ ಬಂದಿದೆ.<br>ಮೇಲುಕೋಟೆ ಹೋಬಳಿಯ ಕದಲಗೆರೆಯಿಂದ ಕಾಡೇನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಕದಲಗೆರೆ ಗ್ರಾಮದಲ್ಲಿ ಸರಪಳಿ:4.50 ಕಿ.ಮೀ. ರಿಂದ ಪ್ರಾರಂಭವಾಗಿ ಕಾಡೇನಹಳ್ಳಿಯ ಗ್ರಾಮದ ಸರಪಳಿ:6.05 ಕಿ.ಮೀ.ವರೆಗೆ 1.55 ಕಿ.ಮೀ ಉದ್ದ ಇರುತ್ತದೆ. ಈ ರಸ್ತೆಯು ಡಾಂಬರೀಕರಣ ಮೇಲ್ಮೈ ಹೊಂದಿದ್ದು, ಪ್ರಸಕ್ತ ಸಾಲಿನಲ್ಲಿ ಸುರಿದ ಮಳೆಯಿಂದ ರಸ್ತೆ ಹಾಳಾಗಿರುವುದು, ಹಾಳಾಗಿರುವ ರಸ್ತೆಯನ್ನು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ಪರಿಶೀಲಿಸಿರುತ್ತಾರೆ. |
| ಆ) | ಸದರಿ ರಸ್ತೆಯ ಡಾಂಬರೀಕರಣದ ಕುರಿತು ಸಂಪೂರ್ಣ ವಿವರ ನೀಡುವುದು; ಪ್ರಸ್ತುತ ಉಂಟಾದ ಮಳೆಯ ಅವಾಂತರದಿಂದ ರಸ್ತೆಯು ತುಂಬಾ ಹದಗೆಟ್ಟಿರುವುದರ ಬಗ್ಗೆ ಅಧಿಕಾರಿಗಳು ಪರಿಶೀಲಿಸಿದ್ದಾರೆಯೇ; (ವಿವರಗಳನ್ನು ನೀಡುವುದು) | |
| ಇ) | ಕದಲಗೆರೆಯಿಂದ ಕಾಡೇನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯು ದುಸ್ಥಿತಿಯಲ್ಲಿದ್ದು, ಸಾರ್ವಜನಿಕರಿಗೆ ತುಂಬಾ ಕಷ್ಟವಾಗಿರುವುದರಿಂದ ರಸ್ತೆ ಡಾಂಬರೀಕರಣವನ್ನು ತುರ್ತಾಗಿ ಮಾಡಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು) | ಪಾಂಡವಪುರ ತಾಲ್ಲೂಕು, ಮಾಣಿಕ್ಯನಹಳ್ಳಿಯಿಂದ ಗರುಡಪುರಕ್ಕೆ ಸೇರುವ ರಸ್ತೆ ಮಾರ್ಗ ಗೌಡಗೆರೆ-ಕಾಡೇನಹಳ್ಳಿ-ಕದಲಗೆರೆ-ದೊಡ್ಡಿಘಟ್ಟ ಸೇರುವ ರಸ್ತೆಯ ಸರಪಳಿ:0.00 ಕಿ.ಮೀ ನಿಂದ 9.00 ಕಿ.ಮೀ.ವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ 2022-23ನೇ ಸಾಲಿನ ಲೆಕ್ಕಶೀರ್ಷಿಕೆ: 5054-04-337-0-01-154 ಜಿಲ್ಲಾ ಮತ್ತು ಇತರೆ ರಸ್ತೆಗಳು-ಸುಧಾರಣೆಗಳು ಅಪೆಂಡಿಕ್ಸ್-ಇ ಅಡಿಯಲ್ಲಿ ಸೇರಿಸುವ ಷರತ್ತಿಗೊಳಪಟ್ಟು ರೂ.350.00 ಲಕ್ಷಗಳ ಮೊತ್ತಕ್ಕೆ ಅನುಮೋದನೆಗೊಂಡಿದ್ದು, ಈ ಕಾಮಗಾರಿಯಲ್ಲಿ ಕದಲಗೆರೆಯಿಂದ ಕಾಡೇನಹಳ್ಳಿ ಗ್ರಾಮ ಸಂಪರ್ಕಿಸುವ ರಸ್ತೆಯ ಭಾಗ ಅಂದರೆ ಸರಪಳಿ:4.50 |

| | | |
|---|---|---|
| | | ರಿಂದ 6.00 ಕಿ.ಮೀ.ವರೆಗೆ ರಸ್ತೆ ಅಭಿವೃದ್ಧಿ ಸೇರಿರುತ್ತದೆ.<br><br>ಸದರಿ ಕಾಮಗಾರಿಯು ಪ್ರಸ್ತುತ ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಈ ಕಾಮಗಾರಿಯನ್ನು ನಿಯಮಾನುಸಾರ ಕೈಗೆತ್ತಿಕೊಂಡು ಶೀಘ್ರವಾಗಿ ಪೂರ್ಣಗೊಳಿಸಿ ಸುಗಮ ಸಂಚಾರಕ್ಕೆ ಅನುವುಮಾಡಲಾಗುವುದು. |

ಲೋಇ 13 ಸಿಕ್ಯೂಎನ್ 2023(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು